

بسم الله الرّحمٰن الرّحيم

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **28–01–2022** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ ـ بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعٰلَمِيْنَ ـ اَلرَّحْمٰنِ الرَّحِيْمِ ـ مٰلِكِ يَوْمِ الدِّيْنِ ـ إِيَّاكَ نَعْبُدُ وَإِيَّاكَ نَسْتَعِيْنُ

اِهْدِنَا الصِّرَاطَ الْمُسْتَقِيْمَ ـ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಹಝ್ರತ್ ಅಬೂಬಕರ್(ರ)ರ ಪ್ರಸ್ತಾಪ ನಡೆಯುತ್ತಿತ್ತು. ಇಂದು ಸಹ ಅದೇ ಮುಂದುವರೆಯುವುದು. **ಹಮ್‌ರಾಉಲ್ ಅಸದ್** ಯುದ್ಧದ ಬಗ್ಗೆ ಹೀಗೆ ಬರೆಯಲಾಗಿದೆ: ಹಝ್ರತ್ ಪೈಗಂಬರ್(ಸ) ಶನಿವಾರದಂದು ಉಹದ್‌ನಿಂದ ಮರಳಿ ಬಂದಾಗ ಮರುದಿನ ಬೆಳಿಗ್ಗೆ ಹಝ್ರತ್ ಅಬ್ದುಲ್ಲಾಹ್ ಬಿನ್ ಅಮ್ರ್ ಬಿನ್ ಔಫ್ ಮುಝ್‌ನಿ ಒಂದು ಖುರೈಶಿಗಳು ಪುನಃ ದಾಳಿ ನಡೆಸುವುದರ ಕುರಿತು ಸಮಾಲೋಚನೆ ನಡೆಸುತ್ತಿರುವುದರ ಬಗ್ಗೆ ಮತ್ತು ಅದರ ತಯಾರಿಯ ಬಗ್ಗೆ ಹಝ್ರತ್ ಪೈಗಂಬರ್(ಸ)ರಿಗೆ ಮಾಹಿತಿ ನೀಡಿದರು. ಆಗ ಹಝ್ರತ್ ಪೈಗಂಬರ್(ಸ) ಹಝ್ರತ್ ಅಬೂಬಕರ್(ರ) ಮತ್ತು ಹಝ್ರತ್ ಉಮರ್(ರ)ರೊಡನೆ ಸಮಾಲೋಚನೆ ನಡೆಸಿ ನಂತರ, ಶತ್ರುಗಳನ್ನು ಎದುರಿಸಲಿಕ್ಕಾಗಿ ಹೊರಡಲು ತೀರ್ಮಾನಿಸಿದರು ಮತ್ತು ಹಿಂದಿನ ದಿನ ಯುದ್ಧದಲ್ಲಿ ನಮ್ಮೊಂದಿಗೆ ಇದ್ದವರೇ ಹೊರಡಬೇಕೆಂದು ಆದೇಶಿಸುತ್ತಾ ಘೋಷಣೆ ಮಾಡಿಸಿದರು. ಈ ಸಂದರ್ಭದಲ್ಲಿ ಹಝ್ರತ್ ಪೈಗಂಬರ್(ಸ) ತನ್ನ ಧ್ವಜವನ್ನು ಹಝ್ರತ್ ಅಲಿ(ರ)ರಿಗೆ ಅಥವಾ ಮತ್ತೊಂದು ವರದಿ ಪ್ರಕಾರ ಅಬೂಬಕರ್(ರ)ರಿಗೆ ಒಪ್ಪಿಸಿದರು. ಮುಸ್ಲಿಮರ ಈ ಸಂಘವು ಮದೀನದಿಂದ 8 ಮೈಲುಗಳ ದೂರದಲ್ಲಿ ಹಮ್‌ರಾಉಲ್ ಅಸದಿಗೆ ತಲುಪಿದಾಗ ಮುಶ್ರಿಕರು ಭಯಗೊಂಡರು ಮತ್ತು ಮದೀನದ ಕಡೆಗೆ ಹೋಗುವ ನಿರ್ಧಾರವನ್ನು ಬಿಟ್ಟುಬಿಟ್ಟರು ಹಾಗೂ ಮಕ್ಕದ ಕಡೆಗೆ ಮರಳಿ ಹೋದರು.

**ಬನೂ ನಝೀರ್** ಯುದ್ಧ ಹಿಜರೀ 4ರಲ್ಲಿ ನಡೆಯಿತು. ಹಝ್ರತ್ ಅಬೂಬಕರ್(ರ), ಹಝ್ರತ್ ಉಮರ್(ರ) ಸಮೇತ 10ರಷ್ಟು ಸಹಾಬಿಯರೊಂದಿಗೆ ಹಝ್ರತ್ ಪೈಗಂಬರ್(ಸ) ಬನೂ ಆಮಿರ್‌ನ ಕೊಲ್ಲಲ್ಪಟ್ಟ ಇಬ್ಬರು ವ್ಯಕ್ತಿಗಳ ಪರಿಹಾರಧನವನ್ನು ವಸೂಲು ಮಾಡಲಿಕ್ಕಾಗಿ ಯಹೂದಿಯರ ಬಳಿಗೆ ಹೋದಾಗ, ಅವರು ಹಝ್ರತ್ ಪೈಗಂಬರ್(ಸ)ರ ಮುಂದೆ ಆಹಾರವನ್ನು ಇರಿಸಿದರು. ಹಝ್ರತ್ ಪೈಗಂಬರ್(ಸ) ಒಂದು ಗೋಡೆಗೆ ಒರಗಿ ಕುಳಿತುಕೊಂಡಿದ್ದರು. ಹಝ್ರತ್ ಪೈಗಂಬರ್(ಸ)ರನ್ನು ಮುಗಿಸಲು ಇದಕ್ಕಿಂತ ಉತ್ತಮ ಅವಕಾಶ ಸಿಗಲಿಕ್ಕಿಲ್ಲ ಎಂದು ಯಹೂದಿಯರು ಪರಸ್ಪರ ಗೂಢಾಲೋಚನೆ ನಡೆಸುತ್ತಾ ಹೇಳತೊಡಗಿದರು. ಮನೆ ಮಾಳಿಗೆಗೆ ಏರಿಕೊಂಡು ಹಝ್ರತ್ ಪೈಗಂಬರ್(ಸ)ರ ಮೇಲೆ ಒಂದು ದೊಡ್ಡ ಕಲ್ಲನ್ನು ಬೀಳಿಸಲಿಕ್ಕಾಗಿ ಅಮ್ರ್ ಬಿನ್ ಜಹಾಶ್ ಸಿದ್ಧನಾದನು. ಆದರೆ ಸಲಾಂ ಬಿನ್ ಮಶ್ಕಮ್ ಎಂಬ ಹೆಸರಿನ ಒಬ್ಬ ಸರದಾರನು ಈ ನಿರ್ಧಾರ ಕೈಬಿಡಲು ಯಹೂದಿಯರಿಗೆ ಸಲಹೆ ಕೊಟ್ಟನು ಮತ್ತು ಹೀಗೆ ಹೇಳಿದನು: ಇದು ಪ್ರತಿಜ್ಞೆಯ ಉಲ್ಲಂಘನೆಯಾಗಿದೆ ಮತ್ತು ನೀವು ಯೋಚಿಸುವ ಎಲ್ಲ ಸಂಗತಿಗಳ ಮಾಹಿತಿ ಅವರಿಗೆ ಖಂಡಿತ ಲಭಿಸುವುದು. ಹಾಗೆಯೇ ಆಯಿತು. ಹಝ್ರತ್ ಪೈಗಂಬರ್(ಸ)ರಿಗೆ ಅಲ್ಲಾಹನಿಂದ ಈ ಗೂಢಾಲೋಚನೆಯ ಅರಿವು ಲಭಿಸಿತು. ಹಝ್ರತ್ ಪೈಗಂಬರ್(ಸ) ಕೂಡಲೇ ಆ ಜಾಗದಿಂದ ಎದ್ದರು ಮತ್ತು ತನ್ನ ಸಹಚರರಿಂದ ಬೇರ್ಪಟ್ಟು ಬೇಗನೇ ಮದೀನಕ್ಕೆ ಮರಳಿದರು. ಹಝ್ರತ್ ಪೈಗಂಬರ್(ಸ) ಮುಹಮ್ಮದ್ ಬಿನ್ ಮಸ್ಲಮರನ್ನು ಈ ಸಂದೇಶದೊಂದಿಗೆ ಕಳುಹಿಸಿದರು: ನೀವು ನನ್ನ ಪಟ್ಟಣದಿಂದ ಹೊರಟು ಹೋಗಿರಿ. ಏಕೆಂದರೆ, ನೀವು ಮಾಡಿರುವ ಯೋಜನೆ ಮೋಸಗಾರಿಕೆಯದ್ದಾಗಿದೆ. ಹಝ್ರತ್ ಪೈಗಂಬರ್(ಸ) ಯಹೂದಿಯರಿಗೆ 10 ದಿನಗಳ ಸಾವಕಾಶವನ್ನು ಕೊಟ್ಟರು. ಆದರೆ ಯಹೂದಿಯರು ನಿರಾಕರಿಸಿದರು ಮತ್ತು 'ನಾವು ನಮ್ಮ ಸ್ವದೇಶವನ್ನು ಖಂಡಿತ ಬಿಟ್ಟುಬಿಡಲಾರೆವು' ಎಂದು ಹೇಳಿದರು. ಆಗ ಹಝ್ರತ್ ಪೈಗಂಬರ್(ಸ) ಬನೂ ನಝೀರಿನ ಕೋಟೆಗಳನ್ನು ಸುತ್ತುವರೆದು ಶಕ್ತವಾದ ಮುತ್ತಿಗೆ ಹಾಕಿದರು. ಅವರ ಸಹಾಯಕ್ಕಾಗಿ ಯಾರೂ ಬರಲಿಲ್ಲ. ಯಹೂದಿಯರ ಹೃದಯದಲ್ಲಿ ಅಲ್ಲಾಹನು ಭಯ ಹುಟ್ಟಿಸಿದನು. ಕೊನೆಗೆ ಅವರು ದೇಶವನ್ನು ಬಿಟ್ಟು ಹೋಗಲು ತಯಾರಾದರು. ಹಝ್ರತ್ ಪೈಗಂಬರ್(ಸ) ಅನ್ಸಾರರ ಅನುಮತಿಯಿಂದ ಬನೂ ನಝೀರ್ ಯುದ್ಧದಿಂದ ಲಭಿಸಿದ ಯುದ್ಧ ಸಂಪತ್ತನ್ನು ಮುಹಾಜಿರರಿಗೆ ವಿತರಣೆ ಮಾಡಿದರು. ಆಗ ಹಝ್ರತ್ ಅಬೂಬಕರ್(ರ) ಹೇಳಿದರು: ಹೇ ಅನ್ಸಾರರ ಸಂಘವೇ, ಅಲ್ಲಾಹನು ನಿಮಗೆ ಉತ್ತಮ ಪ್ರತಿಫಲ ನೀಡಲಿ.

**ಬದ್ರುಲ್ ಮೌಇದ್** ಯುದ್ಧ ಹಿಜರಿ 4ರ ಘಟನೆಯಾಗಿದೆ. ಉಹದ್ ಯುದ್ಧದಿಂದ ಮರಳಿ ಹೋಗುವಾಗ, 'ಮುಂದಿನ ವರ್ಷ ನಮ್ಮ ಭೇಟಿ ಬದ್ರುಸ್ಸಫ್‌ರ ಎಂಬ ಸ್ಥಳದಲ್ಲಿ ಆಗುವುದು, ನಾವು ಅಲ್ಲಿ ಯುದ್ಧ ಮಾಡುವೆವು' ಎಂದು ಅಬೂಸುಫ್‌ಯಾನ್ ಘೋಷಿಸಿದ್ದನು. ಆಗ 'ಸರಿ ಇನ್‌ಶಾ ಅಲ್ಲಾಹ್ ಎಂದು ಅವನೊಡನೆ ಹೇಳು' ಎಂದು ಹಝ್ರತ್ ಪೈಗಂಬರ್(ಸ) ಹಝ್ರತ್ ಉಮರ್(ರ)ರೊಡನೆ ಹೇಳಿದರು. ಬದ್ರ್ ಮದೀನದಿಂದ 150 ಕಿ.ಮಿ. ದೂರದಲ್ಲಿ ಇದೆ. ಇಸ್ಲಾಮಿಗೆ ಮುಂಚೆ ಈ ಜಾಗದಲ್ಲಿ ಪ್ರತಿ ವರ್ಷ ಧುಲ್‌ಕಅದ್ 1ರಿಂದ 8 ದಿನಗಳ ತನಕ ಒಂದು ದೊಡ್ಡ ಮೇಳ ನಡೆಯುತಿತ್ತು. ಮರುವರ್ಷ ವಾಗ್ದಾನದ ಸಮಯ ಸಮೀಪವಾಗುತ್ತಿದ್ದಂತೆ ಅಬೂಸುಫ್‌ಯಾನ್ ಹೋರಾಡುವುದರಿಂದ ಭಯಗೊಳ್ಳುತ್ತಿದ್ದನು ಮತ್ತು ಮುಸ್ಲಿಮರು ಗಾಬರಿಗೊಳ್ಳಲಿಕ್ಕಾಗಿ ಮತ್ತು ಹೋರಾಡಲು ಬರದೇ ಇರಲಿಕ್ಕಾಗಿ ಮುಸ್ಲಿಮರನ್ನು ಎದುರಿಸಲು ಒಂದು ದೊಡ್ಡದಾದ ಸೈನ್ಯದ ತಯಾರಿ ಮಾಡುತ್ತಿದ್ದಾನೆ ಎಂಬ ವದಂತಿಯನ್ನು ಪೂರ್ತಿ ಅರೇಬಿಯದಲ್ಲಿ ಹರಡಿದನು. ಒಂದು ವರದಿಯ ಪ್ರಕಾರ ಹಝ್ರತ್ ಅಬೂಬಕರ್(ರ) ಮತ್ತು ಹಝ್ರತ್ ಉಮರ್(ರ) ಸಹ ಹಝ್ರತ್ ಪೈಗಂಬರ್(ಸ)ರ ಸನ್ನಿಧಿಯಲ್ಲಿ ಹಾಜರಾದರು. ಅವರಿಬ್ಬರು ಹೇಳಿದರು: 'ಯಾ ರಸೂಲಲ್ಲಾಹ್, ಅಲ್ಲಾಹನು ತನ್ನ ಧರ್ಮವನ್ನು ವಿಜಯಿಸುವನು ಮತ್ತು ತನ್ನ ಪ್ರವಾದಿ(ಸ)ರಿಗೆ ಗೌರವವನ್ನು ದಯಪಾಲಿಸುವನು. ನಾವು ಸಮುದಾಯದೊಂದಿಗೆ ವಾಗ್ದಾನವನ್ನು ಮಾಡಿದ್ದೇವೆ. ನಾವು ಅದರ

ಉಲ್ಲಂಘನೆ ಮಾಡುವುದನ್ನು ಇಷ್ಟಪಡುವುದಿಲ್ಲ. ನಾವು ಹೋಗದಿದ್ದರೆ ಸತ್ಯನಿಷೇಧಿಗಳು ಅದನ್ನು ಭೀರುತ್ವವೆಂದು ಭಾವಿಸುವರು. ಆದ್ದರಿಂದ ತಾವು ವಾಗ್ದಾನದ ಪ್ರಕಾರ ಹೋಗಿರಿ. ಅಲ್ಲಾಹನಾಣೆ, ಅದರಲ್ಲಿ ಖಂಡಿತ ಒಳಿತಿದೆ.' ಈ ಭಾವನಾತ್ಮಕ ಮಾತುಗಳನ್ನು ಕೇಳಿ ಹಝ್ರತ್ ಪೈಗಂಬರ್(ಸ) ಬಹಳ ಸಂತೋಷಗೊಂಡರು. ಹಝ್ರತ್ ಪೈಗಂಬರ್(ಸ) ಒಂದುವರೆ ಸಾವಿರ ಸಹಾಬಿಯರೊಂದಿಗೆ ಬದ್ರ್‌ಗೆ ರವಾನೆಯಾದರು. ಆದರೆ ಅಬುಸುಫ್‌ಯಾನ್ ಸೈನಿಕರೊಂದಿಗೆ ಅಲ್ಲಿಗೆ ಬರಲಿಲ್ಲ. ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಹೇಳುತ್ತಾರೆ: ಇಸ್ಲಾಮಿನ ಸೈನ್ಯ 8 ದಿನಗಳು ಬದ್ರಿನ್‌ಲ್ಲಿ ತಂಗಿದರು. ಸಹಾಬಿಯರು ಮೇಳದಲ್ಲಿ ವ್ಯಾಪಾರ ಮಾಡಿಕೊಂಡು ಸಾಕಷ್ಟು ಲಾಭವನ್ನು ಗಳಿಸಿದರು ಮತ್ತು ತಮ್ಮ ಸಂಪತ್ತನ್ನು ದುಪ್ಪಟ್ಟುಗೊಳಿಸಿದರು.

**ಬನೂ ಮುಸ್ತಲಖ್** ಎಂಬ ಯುದ್ಧ ಹಿಜರೀ 5ರ ಶಅಬಾನ್‌ನಲ್ಲಿ ನಡೆದಿತ್ತು. ಬನೂ ಮುಸ್ತಲಖ್ ಯುದ್ಧದ ಮತ್ತೊಂದು ಹೆಸರು ಮರೀಸೀಅ್ ಎಂದಾಗಿದೆ. ಬನೂ ಮುಸ್ತಲಖ್ ಗೋತ್ರವು ಮುಸ್ಲಿಮರ ಮೇಲೆ ಆಕ್ರಮಣ ನಡೆಸಲು ನಿರ್ಧರಿಸಿದ್ದಾರೆ ಎಂಬ ಸುದ್ದಿ ಹಝ್ರತ್ ಪೈಗಂಬರ್(ಸ)ರಿಗೆ ಲಭಿಸಿತು. ಆಗ ಹಝ್ರತ್ ಪೈಗಂಬರ್(ಸ) 700 ಸಹಾಬಿಯರ ಜೊತೆಗೆ ಹೊರಟರು. ಒಂದು ವರದಿಯ ಪ್ರಕಾರ ಈ ಸಂದರ್ಭಲ್ಲಿ ಮುಹಾಜಿರರ ಧ್ವಜ ಹಝ್ರತ್ ಅಬೂಬಕರ್(ರ)ರ ಬಳಿಯಲ್ಲಿತ್ತು.

**ಇಫ್‌ಕಿನ ಘಟನೆ,** ಎಂದರೆ ಹಝ್ರತ್ ಅಬೂಬಕರ್(ರ)ರ ಪುತ್ರಿಯಾದ ಹಝ್ರತ್ ಆಯಿಶ(ರ)ರ ಮೇಲೆ ಕಪಟವಿಶ್ವಾಸಿಗಳು ಆರೋಪ ಹೊರಿಸಿದ ಘಟನೆ ಬನೂ ಮುಸ್ತಲಖ್ ಯುದ್ಧದಿಂದ ಮರಳಿ ಬರುವಾಗ ನಡೆಯಿತು. ಸಹೀಹ್ ಬುಖಾರಿಯಲ್ಲಿ ಹಝ್ರತ್ ಆಯಿಶ(ರ)ರ ವರದಿಯ ಪ್ರಕಾರ, ಒಂದು ರಾತ್ರಿ ಹಝ್ರತ್ ಆಯಿಶ(ರ) ಶೌಚ ಕಾರ್ಯಕ್ಕಾಗಿ ಹೋದರು. ಮರಳಿ ಬರುವಾಗ ಅವರ ಮುತ್ತಿನ ಹಾರ ಕಾಣೆಯಾಗಿದೆ ಎಂದು ಅವರಿಗೆ ತಿಳಿಯಿತು. ಅವರು ಹಾರವನ್ನು ಹುಡುಕಲು ಹೋದರು. ಅವರು ಮರಳಿ ಬಂದಾಗ ಸೈನ್ಯ ಹೊರಟುಹೋಗಿತ್ತು. ಸೈನ್ಯದ ಹಿಂದೆ ಇದ್ದ ಸಫ್‌ವಾನ್ ಬಿನ್ ಮುಅ್‌ತಲ್ ಝುಕ್‌ವಾನಿ ಎಂಬವರು ಗೌರವಾದರದಿಂದ ಹಝ್ರತ್ ಆಯಿಶ(ರ)ರನ್ನು ಒಂಟೆಯಲ್ಲಿ ಸವಾರಿ ಮಾಡಿಸಿದರು ಮತ್ತು ಅವರು ಸೈನ್ಯದೊಂದಿಗೆ ಬಂದುಸೇರಿದರು. ಮದೀನ ತಲುಪಿದ ನಂತರ ಹಝ್ರತ್ ಆಯಿಶ(ರ) ರೋಗಿಯಾಗಿದ್ದರು. ಕಪಟವಿಶ್ವಾಸಿಗಳ ನಡುವೆ ವಿವಿಧ ತರದ ಮಾತುಗಳು ಹರಡಿದುವು. ಹಝ್ರತ್ ಆಯಿಶ(ರ) ಹೇಳುತ್ತಾರೆ: ನನಗೆ ಈ ಮಾತುಗಳ ಬಗ್ಗೆ ಏನೂ ಗೊತ್ತಿರಲಿಲ್ಲ. ಆದರೆ ನಾನು ರೋಗಿಯಾಗಿರುವಾಗ ನನ್ನೊಂದಿಗೆ ಹಝ್ರತ್ ಪೈಗಂಬರ್(ಸ) ಸಾಮಾನ್ಯವಾಗಿ ತೋರಿಸುತ್ತಿದ್ದ ಕಾಳಜಿಯನ್ನು ತೋರಿಸದೇ ಇದ್ದಾಗ ನಾನು ಅಸಮಾಧಾನಗೊಂಡೆ. ನನಗೆ ಈ ಸಂಗತಿಗಳ ಅರಿವಾದಾಗ ನನ್ನ ಕಾಯಿಲೆ ಇನ್ನೂ ಹೆಚ್ಚಾಯಿತು. ಹೀಗೆ ನಾನು ಹಝ್ರತ್ ಪೈಗಂಬರ್(ಸ)ರ ಅನುಮತಿಯಿಂದ ನನ್ನ ಹೆತ್ತವರ ಮನೆಗೆ ಹೋದೆ. ಹಝ್ರತ್ ಪೈಗಂಬರ್(ಸ) ಹಝ್ರತ್ ಅಲಿ ಬಿನ್ ಅಬೂತಾಲಿಬ್(ರ) ಮತ್ತು ಹಝ್ರತ್ ಉಸಾಮ ಬಿನ್ ಝೈದ್‌ರಿಂದ ಸಲಹೆ ಪಡೆದರು.

ಹಝ್ರತ್ ಆಯಿಶ(ರ) ಹೇಳುತ್ತಾರೆ: ನಾನು ದಿನಪೂರ್ತಿ ಅಳುತ್ತಿದ್ದೆ. ನನ್ನ ಕಣ್ಣೀರು ನಿಲ್ಲುತ್ತಿರಲಿಲ್ಲ ಮತ್ತು ನನಗೆ ನಿದ್ದೆಯೂ ಬರುತ್ತಿರಲಿಲ್ಲ. ಒಂದು ತಿಂಗಳು ಹೀಗೆಯೇ ದಾಟಿ ಹೋಯಿತು. ಅನಂತರ ಒಂದು ದಿನ ಹಝ್ರತ್ ಪೈಗಂಬರ್(ಸ) ನನ್ನೊಡನೆ ಹೇಳಿದರು: 'ಆಯಿಶಾ, ನೀನು ನಿರಪರಾಧಿಯಾಗಿದ್ದರೆ ಅಲ್ಲಾಹನು ಖಂಡಿತ ನಿನಗೆ ಇದರಿಂದ ಮುಕ್ತಿ ನೀಡುವನು. ನಿನ್ನಿಂದ ತಪ್ಪಾಗಿದ್ದರೆ ಅಲ್ಲಾಹನೊಡನೆ ಕ್ಷಮಾಪಣೆ ಕೇಳು.' ತನ್ನ ಹೆತ್ತವರು ಮೌನವಾಗಿರುವುದನ್ನು ಕಂಡು ಹಝ್ರತ್ ಆಯಿಶ(ರ) ಹೀಗೆ ಹೇಳಿದರು: ಅಲ್ಲಾಹನಾಣೆ, ಆ ಮಾತುಗಳು ನಿಮ್ಮ ಹೃದಯಗಳಲ್ಲಿ ಬೇರೂರಿದೆ ಎಂದು ನನಗೆ ಗೊತ್ತಾಗಿದೆ. ಅಲ್ಲಾಹನಾಣೆ, ನನ್ನ ಮತ್ತು ನಿಮ್ಮ ಉದಾಹರಣೆಯು ಯೂಸುಫ್(ಅ)ರ ತಂದೆಯ ಅಂಥದ್ದು ಎಂದು ನಾನು ತಿಳಿಯುತ್ತೇನೆ. ಅವರು ಹೀಗೆ ಹೇಳಿದ್ದರು: **'ಫಸಬ್‌ರುನ್ ಜಮೀಲ್ ವಲ್ಲಾಹುಲ್ ಮುಸ್‌ತಆನು ಅಲಾ ಮಾ ತಸಿಫೂನ್.'** (ಉತ್ತಮವಾದ ಸಹನೆಯೇ ನನಗೀಗ ಉಚಿತವಾದುದು. ನೀವು ಹೇಳುತ್ತಿರುವ ಮಾತನ್ನು ತಡೆಯಲು ಅಲ್ಲಾಹನಿಂದಲೇ ಸಹಾಯ ಬೇಡಲು ಸಾಧ್ಯ.) ಅಷ್ಟರಲ್ಲಿ ಪೈಗಂಬರ್(ಸ)ರ ಮೇಲೆ ದಿವ್ಯವಾಣಿ ಅವತೀರ್ಣವಾಯಿತು. ದಿವ್ಯವಾಣಿಯ ಸ್ಥಿತಿ ಬಿಟ್ಟುಹೋದಾಗ ಹಝ್ರತ್ ಪೈಗಂಬರ್(ಸ) ಮುಗುಳ್ನಗುತ್ತಿದ್ದರು ಮತ್ತು ಹೀಗೆ ಹೇಳಿದರು: 'ಓ ಆಯಿಶಾ! ಅಲ್ಲಾಹನು ನಿನ್ನ ಮುಗ್ಧತೆಯನ್ನು ದೃಢಪಡಿಸಿದ್ದಕ್ಕಾಗಿ ಅವನಿಗೆ ಕೃತಜ್ಞತೆಯನ್ನು ಅರ್ಪಿಸು.' ಹಝ್ರತ್ ಆಯಿಶ(ರ)ರ ತಾಯಿ ಹೇಳಿದರು, 'ಎದ್ದು ಹಝ್ರತ್ ಪೈಗಂಬರ್(ಸ)ರ ಬಳಿಗೆ ಹೋಗು.' ಆಗ ಹಝ್ರತ್ ಆಯಿಶ(ರ) ಹೇಳಿದರು: ಇಲ್ಲ ನಾನು ಅವರ ಬಳಿಗೆ ಹೋಗುವುದಿಲ್ಲ, ನಾನು ಅಲ್ಲಾಹನನ್ನು ಹೊರತುಪಡಿಸಿ ಯಾರಿಗೂ ಕೃತಜ್ಞತೆ ಅರ್ಪಿಸುವುದಿಲ್ಲ.

ಮಿಸ್ತಹ್ ಬಿನ್ ಉಸಾಸ ನಿಕಟ ಸಂಬಂಧಿಯಾದ ಕಾರಣದಿಂದ ಹಝ್ರತ್ ಅಬೂಬಕರ್(ರ) ಅವರಿಗೆ ಖರ್ಚಿಗಾಗಿ ಕೊಡುತ್ತಿದ್ದರು. ಹಝ್ರತ್ ಆಯಿಶ(ರ)ರ ನಿರಪರಾಧಿತ್ವದ ಬಗ್ಗೆ ಅಲ್ಲಾಹನು ದಿವ್ಯವಾಣಿ ಅವತೀರ್ಣಗೊಳಿಸಿದಾಗ, ಇನ್ನು ಮುಂದೆ ಮಿಸ್ತಹ್‌ನಿಗೆ ಖರ್ಚಿಗೆ ನೀಡುವುದಿಲ್ಲ ಎಂದು ಹಝ್ರತ್ ಅಬೂಬಕರ್(ರ) ಪ್ರತಿಜ್ಞೆ ಮಾಡಿದರು. ಆಗ ಅಲ್ಲಾಹನು ಹೀಗೆ ದಿವ್ಯವಾಣಿ ಅವತೀರ್ಣಗೊಳಿಸಿದನು: 'ನಿಮ್ಮ ಪೈಕಿ ಉನ್ನತ ಸ್ಥಾನದಲ್ಲಿರುವವರು ಮತ್ತು ಐಶ್ವರ್ಯವಂತರು ತಮ್ಮ ನಿಕಟ ಸಂಬಂಧಿಕರಿಗೂ ನಿರ್ಗತಿಕರಿಗೂ ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡುವವರಿಗೂ ಏನನ್ನೂ ಕೊಡುವುದಿಲ್ಲವೆಂದು ಪ್ರತಿಜ್ಞೆ ಮಾಡಬಾರದು.' ಈ ವಚನದ ಅವತೀರ್ಣದ ನಂತರ ಹಝ್ರತ್ ಅಬುಬಕರ್(ರ) ಮಿಸ್ತಹ್‌ರಿಗೆ ಪುನಃ ಖರ್ಚು ನೀಡಲು ಶುರುಮಾಡಿದರು.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: "ಮುನ್ನೆಚ್ಚರಿಕೆ ಮತ್ತು ಶಿಕ್ಷೆಯ ಭವಿಷ್ಯವಾಣಿಗಳನ್ನು ಅಲ್ಲಾಹನು ಪಶ್ಚಾತ್ತಾಪ, ಕ್ಷಮೆ, ಪ್ರಾರ್ಥನೆ ಮತ್ತು ದಾನ ಧರ್ಮಗಳ ಆಧಾರದ ಮೇಲೆ ದೂರಮಾಡುತ್ತಾನೆ ಮತ್ತು ತಪ್ಪಿಸುತ್ತಾನೆ ಎಂಬುದು ಅಲ್ಲಾಹನ ಗುಣವಾಗಿದೆ. ಆದ್ದರಿಂದ ಅವನು ಮನುಷ್ಯನಿಗೂ ಅದೇ ನೈತಿಕತೆಯನ್ನು ಕಲಿಸಿದನು. ಪವಿತ್ರ ಖುರ್‌ಆನ್ ಮತ್ತು ಹದೀಸ್‌ನಿಂದ ಸಾಬೀತಾಗಿರುವಂತೆ, ಪೂರ್ಣ ದುರುದ್ದೇಶದಿಂದ, ಕಪಟಿಗಳು ಹಝ್ರತ್ ಆಯಿಶ(ರ)ರ ಕುರಿತು ಸತ್ಯಕ್ಕೆ ವಿರುದ್ಧವಾದ ಆರೋಪವನ್ನು ಎಸಗಿದಾಗ, ಸರಳ ಸ್ವಭಾವಿಗಳಾದ ಕೆಲವು ಸಹಾಬಿಯರು ಕೂಡ ಅವರೊಂದಿಗೆ ಸೇರಿಕೊಂಡಿದ್ದರು. ಆ ಸಹಾಬಿಯರಲ್ಲಿ ಒಬ್ಬರು ದಿನಕ್ಕೆ ಎರಡು ಬಾರಿ ಹಝ್ರತ್ ಅಬೂಬಕರ್(ರ)ರ ಮನೆಯಿಂದ ಊಟವನ್ನು ಮಾಡುತ್ತಿದ್ದ ವ್ಯಕ್ತಿಯಾಗಿದ್ದರು. ಸುಳ್ಳಾರೋಪದಲ್ಲಿ ಭಾಗಿಯಾಗಿದ್ದ ಕಾರಣದಿಂದ

ಈ ದುಷ್ಕೃತ್ಯಕ್ಕೆ ಶಿಕ್ಷೆ ಎಂಬಂತೆ ಇನ್ನು ಮುಂದೆ ಅವರಿಗೆ ಆಹಾರವನ್ನು ನೀಡುವುದಿಲ್ಲ ಎಂದು ಹಝ್ರತ್ ಅಬುಬಕರ್(ರ) ಪ್ರತಿಜ್ಞೆ ಮಾಡಿದ್ದರು. ಆಗ 'ಅವರು ಕ್ಷಮಿಸಲಿ ಮತ್ತು ಸೈರಿಸಿಕೊಳ್ಳಲಿ. ಅಲ್ಲಾಹನು ನಿಮಗೆ ಕ್ಷಮೆ ನೀಡಬೇಕೆಂದು ನೀವು ಬಯಸುವುದಿಲ್ಲವೇ? ಅಲ್ಲಾಹನು ಅತ್ಯಂತ ಕ್ಷಮಾಶೀಲನೂ ಕಾರುಣ್ಯನಿಧಿಯೂ ಆಗಿದ್ದಾನೆ' ಎಂಬ ಪವಿತ್ರ ಖುರ್‌ಆನಿನ ವಚನ ಅವತೀರ್ಣವಾಯಿತು. ಇದರಂತೆ ಹಝ್ರತ್ ಅಬೂಬಕರ್(ರ) ತಮ್ಮ ಪ್ರತಿಜ್ಞೆಯನ್ನು ಮುರಿದರು ಮತ್ತು ಎಂದಿನಂತೆ ಪುನಃ ಅವರಿಗೆ ಆಹಾರ ನೀಡಲು ಶುರುಮಾಡಿದರು. ಆದ್ದರಿಂದ ಶಿಕ್ಷಾ ರೂಪದಲ್ಲಿ ಅಥವಾ ಮುನ್ನೆಚ್ಚರಿಕೆಯ ರೀತಿಯಲ್ಲಿ ಏನಾದರೂ ಪ್ರತಿಜ್ಞೆ ಮಾಡಿದರೆ ಆ ಪ್ರತಿಜ್ಞೆಯನ್ನು ಮುರಿಯುವುದು ಉತ್ತಮ ನೈತಿಕತೆಯ ಒಂದು ಅಂಶವಾಗಿದೆ ಎಂದು ಇಸ್ಲಾಂ ಹೇಳುತ್ತದೆ. ಉದಾಹರಣೆಗೆ, ಯಾರಾದರೂ ತನ್ನ ಸೇವಕನನ್ನು ಐವತ್ತು ಬಾರಿ ಚಪ್ಪಲಿಯಿಂದ ಹೊಡೆಯುತ್ತೇನೆ ಎಂದು ಪ್ರತಿಜ್ಞೆ ಮಾಡಿದ ನಂತರ, ಆ ಸೇವಕನ ಪಶ್ಚಾತ್ತಾಪ ಮತ್ತು ಕ್ಷಮಾಪನೆ ಕಾರಣದಿಂದ ಅವನನ್ನು ಕ್ಷಮಿಸುವುದು ಇಸ್ಲಾಮಿನ ಸಂಪ್ರದಾಯವಾಗಿದೆ; ಸುನ್ನತಾಗಿದೆ. ಇದು ಅಲ್ಲಾಹನ ಸ್ವಭಾವವನ್ನು ಮನುಷ್ಯನು ತನ್ನಲ್ಲಿ ಅಳವಡಿಸುವಂತಹ ಸಂಗತಿಯಾಗಿದೆ. ವಾಗ್ದಾನದ ಉಲ್ಲಂಘನೆ ಬಗ್ಗೆ ಅಲ್ಲಾಹನು ಪ್ರಶ್ನಿಸುವನು. ಆದರೆ ಮುನ್ನೆಚ್ಚರಿಕೆ ಅಥವಾ ಶಿಕ್ಷೆ ನೀಡುವುದಾಗಿ ಮಾಡಿದ ಪ್ರತಿಜ್ಞೆಯ ಬಗ್ಗೆ ಪ್ರಶ್ನಿಸಲಾಗುವುದಿಲ್ಲ."

ಮಕ್ಕದ ಖುರೈಶಿಗಳು ಮತ್ತು ಮುಸ್ಲಿಮರ ಮಧ್ಯೆ ಮೂರನೇ ದೊಡ್ಡ ಯುದ್ಧವಾದ **ಅಹ್‌ಝಾಬ್ ಯುದ್ಧ** ಹಿಜರಿ 5 ಶವ್ವಾಲ್ ತಿಂಗಳಲ್ಲಿ ನಡೆದಿತ್ತು. ಯಹೂದಿಯರ ಗೋತ್ರವಾದ ಬನೂ ನಝೀರನ್ನು ಮದೀನದಿಂದ ಹೊರಗೆ ಹಾಕಲಾದಾಗ ಅವರು ಖೈಬರಿಗೆ ಹೋಗಿದ್ದರು. ಅಲ್ಲಿ ಅವರು ಮಕ್ಕದ ಖುರೈಶಿಗಳು ಮತ್ತು ಅರೇಬಿಯದ ಇತರ ಗೋತ್ರಗಳೊಂದಿಗೆ ಒಪ್ಪಂದ ಮಾಡಿಕೊಂಡರು ಮತ್ತು 10 ಸಾವಿರದ ಸೈನ್ಯವನ್ನು ತಯಾರುಮಾಡಿದರು. ಈ ಸುದ್ದಿ ಹಝ್ರತ್ ಪೈಗಂಬರ್(ಸ)ರಿಗೆ ಲಭಿಸಿದಾಗ ಅವರು ಸಮಾಲೋಚನೆ ನಡೆಸಿದರು. ಹಝ್ರತ್ ಸಲ್ಮಾನ್ ಫಾರಸಿ(ರ)ರ ಸಲಹೆ ಪ್ರಕಾರ ಮದೀನದ ತೆರೆದ ಭಾಗವಾದ ಉತ್ತರ ದಿಕ್ಕಿನಲ್ಲಿ 6 ದಿನಗಳಲ್ಲಿ ಸುಮಾರು ಮೂರುವರೆ ಮೈಲುಗಳಷ್ಟು ಉದ್ದದ ಕಂದಕವನ್ನು ಅಗೆಯಲಾಯಿತು. ಕಂದಕವನ್ನು ಅಗೆಯುವುದರಲ್ಲಿ ಯಾವನೇ ಮುಸ್ಲಿಮನು ಹಿಂದುಳಿದು ಇರುತ್ತಿರಲಿಲ್ಲ. ಹಝ್ರತ್ ಅಬೂಬಕರ್(ರ) ಮತ್ತು ಹಝ್ರತ್ ಉಮರ್(ರ)ರಿಗೆ ಬುಟ್ಟಿ ಸಿಗದಿರುವಾಗ ಅವರು ಬೇಗನೇ ತಮ್ಮ ಬಟ್ಟೆಗಳಲ್ಲಿ ಮಣ್ಣುಗಳನ್ನು ತೆಗೆಯುತ್ತಿದ್ದರು. ಹಝ್ರತ್ ಅಬೂಬಕರ್(ರ) ಮುಸ್ಲಿಮರ ಒಂದು ಭಾಗದ ನೇತೃತ್ವ ವಹಿಸುತ್ತಿದ್ದರು. ಅನಂತರ ಈ ಜಾಗದಲ್ಲಿ ಒಂದು ಮಸೀದಿಯನ್ನು ನಿರ್ಮಿಸಲಾಗಿತ್ತು ಅದನ್ನು ಸಿದ್ದೀಖ್ ಮಸ್ಜಿದ್ ಎಂದು ಕರೆಯಲಾಗುತ್ತಿತ್ತು.

(ಹಝ್ರತ್ ಅಬೂಬಕರ್(ರ)ರ ಪ್ರಸ್ತಾಪ ಮುಂದುವರೆಯುವುದು ಎಂದು ಹೇಳಿದ ನಂತರ ಹುಝೂರ್ ಇತ್ತೀಚೆಗೆ ನಿಧನರಾದ ಸನ್ಮಾನ್ಯ ಮುಖ್ತಾರ್ ಅಹ್ಮದ್ ಗೊಂದಲ್ ಸಾಹಿಬ್‌ರ ಪತ್ನಿಯಾದ ಸನ್ಮಾನ್ಯ ಮುಬಾರಕ ಬೇಗಂ ಸಾಹಿಬ, ಸನ್ಮಾನ್ಯ ಮೀರ್ ಅಬ್ದುಲ್‌ವಹೀದ್ ಸಾಹಿಬ್, ಅಮೇರಿಕದ ಸನ್ಮಾನ್ಯ ಸಯ್ಯದ್ ವಖಾರ್ ಅಹ್ಮದ್ ಸಾಹಿಬ್‌ರ ಬಗ್ಗೆ ಪ್ರಸ್ತಾಪಿಸಿದರು ಮತ್ತು ಜನಾಝಾ ಗಾಯಿಬ್ ನಿರ್ವಹಿಸುವುದಾಗಿ ಹೇಳಿದರು. ಹುಝೂರ್ ಎಲ್ಲ ದಿವಂಗತರ ಮಗ್‌ಫಿರತ್ ಮತ್ತು ಪದವಿಗಳ ಉನ್ನತಿಗಾಗಿ ದುಆ ಮಾಡಿದರು.)

*****

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَاْمُرُ بِالْعَدْلِ وَالْاِحْسَانِ وَاِيْتَاءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis***(atba)
*At, Masjid Mubarak, Islamabad, Tilford, UK, On 28-01-2022*
**Summarized by** *Majlis Ansarullah Bharat*
***Kannada Translation**:* Moulavi Inamullah for Kannada Desk, Qadian
***Reviewed by**:* M.P Ibrahim |***Layout**:* U Basheer Ahmad
***Published By**:* Kannada Isha'at Team for Nazarath Nashr-O-Isha'ath, Qadian
***Email**: khutuba.kannada@gmail.com*
**You can find all the Sermons archived at**: www.alislam.org/friday-sermon